# ಕೆರೆ ಸಮ್ಮೇಳನಕ್ಕೆ ಭರದ ಸಿದ್ಧತೆ



**ಗ್ರಾಮಾಭ್ಯುದಯದ 100 ಸ್ವ ಸಹಾಯ ಸಂಘಗಳು ತಮ್ಮ ಗ್ರಾಮದ ಕೆರೆ ಪರಿಸ್ಥಿತಿ ಅಭ್ಯಾಸ ಮಾಡಿ ಸಮ್ಮೇಳನಕ್ಕೆ ಬರಲಿದ್ದಾರೆ. ಕೆರೆ ಸಮ್ಮೇಳನಕ್ಕೆ 7 ರಾಜ್ಯಗಳಿಂದ ತಜ್ಞ ಪ್ರತಿನಿಧಿಗಳು ಬರಲಿದ್ದಾರೆ. ಕರ್ನಾಟಕದ 10 ಜಿಲ್ಲೆಗಳಿಂದ ಪ್ರತಿನಿಧಿಗಳು ಹೆಸರು ನೊಂದಾವಣೆ ಮಾಡಿದ್ದಾರೆ. 8 ವಿಶ್ವವಿದ್ಯಾಲಯಗಳ, 42 ಸಂಸ್ಥೆಗಳ ಪ್ರತಿನಿಧಿಗಳು ಬರಲಿದ್ದಾರೆ. ಅಲ್ಲದೇ, ಗ್ರಾಮ ಅರಣ್ಯ ಸಮಿತಿಗಳು ಕೆರೆ ಸಂವರ್ಧನಾ ಸಂಘಗಳು, ಸ್ವ ಸಹಾಯ ಸಂಘಗಳು, ಗ್ರಾಮ ಪಂಚಾಯ್ತಿ ಜೀವ ವೈವಿಧ್ದಯ ಸಮಿತಿಗಳು, ಶಿಕ್ಷಕರು, ವಿದ್ಯಾರ್ಥಿಗಳು, ಸಂಶೋಧಕರು, ಸಹಕಾರಿ ಸಂಸ್ಥೆಗಳು, ದೇವಸ್ಥಾನ ಸಮಿತಿಗಳು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿವೆ. ಉನ್ನತ ಅರಣ್ಯ ಅಧಿಕಾರಿಗಳು, ಮಾಲಿನ್ಯ ನಿಯಂತ್ರಣ ಮಂಡಳಿ, ಶಿಕ್ಷಣ ಸಂಸ್ಥೆಗಳು, ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ನಾಡಿನ ಹಲವಾರು ಪರಿಸರ ತಜ್ಞರು ಪಶ್ಚಿಮ ಘಟ್ಟ ಉಳಿಸಿ ಆಂದೋಲನದ ಕಾರ್ಯಕರ್ತರು ಬರಲಿದ್ದಾರೆ ಎಂದರು.**

**ಶಿರಸಿ:** ನ. 13, 14 ಹಾಗೂ 15ರಂದು ಶಿರಸಿಯಲ್ಲಿ ನಡೆಯಲಿರುವ ಕೆರೆ ಸಮ್ಮೇಳನದ ಸಿದ್ಧತೆಗಳು ಭರದಿಂದ ಸಾಗಿದ್ದು, ಸಮ್ಮೇಳನದ ಸಂಪರ್ಕ ಅಭಿಯಾನ ನಡೆದಿದ್ದು, ಸಮ್ಮೇಳನದ ಅಂಗವಾಗಿ ವಿದ್ಯಾರ್ಥಿಗಳಿಂದ ಕೆರೆ ಅಧ್ಯಯನಗಳ ಮಂಡನೆ, ಸ್ಪರ್ಧೆಗಳು ಬೆಂಗಳೂರು, ಶಿರಸಿ ಹೊನ್ನಾವರಗಳಲ್ಲಿ ನಡೆದಿವೆ ಎಂದು ಸಂಘಟಕ ಅನಂತ ಅಶೀಸರ ತಿಳಿಸಿದರು.

ನಗರದ ಯೋಗಮಂದಿರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಸಾಗರದ ಜಿಗಳೇಮನೆ ಗ್ರಾಮದಲ್ಲಿ ಶಿವಮೊಗ್ಗ ಜಿಲ್ಲೆ ಕಾರ್ಯಕರ್ತರು ಸಭೆ ಸೇರಿ ಸಮ್ಮೇಳನದಲ್ಲಿ ಪಾಲ್ಗೊಳ್ಳುವ ಬಗ್ಗೆ ತಯಾರಿ ನಡೆಸಿದ್ದಾರೆ. ಸ್ವರ್ಣವಲ್ಲಿ ಸಸ್ಯ ಲೋಕದ ಕೆರೆಗೆ ಭೇಟಿ ನೀಡಿ ಪೂಜೆ ಮಾಡುವ ಮೂಲಕ ಕೆರೆ ಸಮ್ಮೇಳನ ಚಟುವಟಿಕೆಗಳು ಆರಂಭವಾಗುತ್ತವೆ. ಉದ್ಘಾಟನಾ ಕಾರ್ಯಕ್ರಮಕ್ಕೂ ಪೂರ್ವದಲ್ಲಿ ಬೆಳಗ್ಗೆ 10 ಗಂಟೆಗೆ ವಿಜ್ಞಾನಿ ಟಿ.ವಿ. ರಾಮಚಂದ್ರರ ಮುಖ್ಯ ಭಾಷಣ ನಡೆಯಲಿದೆ. ನಂತರ ನಡೆಯುವ ಉದ್ಘಾಟನಾ ಸಮಾರಂಭ ದಲ್ಲಿ ಪಶ್ಚಿಮ ಘಟ್ಟದ ಜಲಮೂಲಗಳ ಕುರಿತ ವಿಶೇಷ ಅಧ್ಯಯನ ವರದಿ ಹಾಗೂ ಉ.ಕ. ಜಿಲ್ಲೆಯ ಪರಿಸರ ಧಾರಣಾ ಸಾಮರ್ಥ್ಯ ಅಧ್ಯಯನದ ಸಮಗ್ರ ವರದಿಯ ಬಿಡುಗಡೆ ಆಗಲಿದೆ. ಕೆರೆ ಪರಿಸ್ಥಿತಿ ಬಿಂಬಿಸುವ ರೂಪಕ, ಪರಿಸರ ಹಾಡು, ಹಳ್ಳಿ ಹಾಡು, ಮಹಿಳೆಯರ ಯಕ್ಷಗಾನ ಏರ್ಪಾಡಾಗಿವೆ ಎಂದರು.

ಶಿವಮೊಗ್ಗ ಜಿಲ್ಲೆಯ ಜಿಗಳೇಮನೆ ಗ್ರಾಮದ ಗ್ರಾಮ ಅರಣ್ಯ ಸಮಿತಿಗೆ ಕೆರೆಗಳ ಪುನಃಶ್ಚೇತನ ಮಾಡಿದ್ದಕ್ಕೆ ಸನ್ಮಾನಿಸಲಾಗುವುದು. ಪರಿಸರ ಅಧ್ಯಯನ ವರದಿಗಳ ಪ್ರದರ್ಶನವನ್ನು ಸ್ವರ್ಣವಲ್ಲೀ ಮಠದ ಆವಾರದಲ್ಲಿ ಏರ್ಪಡಿಸಲಾಗುವುದು. ಗೋಷ್ಠಿಯಲ್ಲಿ ಪಶ್ಚಿಮಘಟ್ಟದ ಜೌಗು ಪ್ರದೇಶ-ಕೆರೆಗಳ ಸಂರಕ್ಷಣೆ ಕುರಿತ ಯಶೋಗಾಥೆಗಳು, ಅನುಭವ-ಅಭಿಪ್ರಾಯಗಳ ಹಂಚಿಕೆ ನಡೆಯಲಿದೆ. ಗೋಷ್ಠಿಯ ಅಧ್ಯಕ್ಷತೆಯನ್ನು ಗ್ರಾಮೀಣ ಅಭಿವೃದ್ಧಿ ಕಾರ್ಯಕರ್ತ ಪ್ರಕಾಶ ಭಟ್ಟ ವಹಿಸುವರು. ಪರಿಸರ ಬರಹಗಾರ ಶಿವಾನಂದ ಕಳವೆ ಅವರ ಮುಖ್ಯ ಮಂಡನೆ ನಂತರ ಶಿವಮೊಗ್ಗ, ಉ.ಕ. ಚಿಕ್ಕಮಗಳೂರು, ದ.ಕ. ಗಳ ಪರಿಸರ ತಜ್ಞರು ಅನುಭವ, ಕೆರೆ, ಸಂರಕ್ಷಣಾ ಪ್ರಯತ್ನ ಮಂಡಿಸುವರು. ಸಂಜೆ 4.30ಕ್ಕೆ ದೇವಾಲಯ ಪುಷ್ಕರಣಿಗಳ ನಿರ್ವಹಣೆ ಗೋಷ್ಠಿಯ ಸಾನ್ನಿಧ್ಯವನ್ನು ಸ್ವರ್ಣವಲ್ಲೀ ಶ್ರೀ ವಹಿಸುವರು. ಶೈಲಜಾ ಮತ್ತು ರಘುನಂದನ ಭಟ್ಟ ಅವರು ಕೈಗೊಂಡ ಕೆರೆ ಪುನಶ್ಚೇತನ ಪ್ರಯೋಗಗಳ ಯಶೋಗಾಥೆ ಲೇಖನ ಸಂಕಲವನ್ನು ಪ್ರೊ.ಬಿ.ಎಂ. ಕುಮಾರಸ್ವಾಮಿ ಬಿಡುಗಡೆ ಮಾಡುವರು. 2ನೇ ದಿನದ ಗೋಷ್ಠಿಗಳ ಉದ್ಘಾಟನಾ ಸಮಾರಂಭದಲ್ಲಿ ಲಯನ್ಸ್ ಸ್ಕೂಲ್‌ನಲ್ಲಿ ಪರಿಸರವಾದಿ ಸುರೇಶ್ ಹೆಬ್ಳಿಕರ್ ಪಾಲ್ಗೊಳ್ಳುವರು.

ಕಳೆದ 3 ತಿಂಗಳುಗಳಿಂದ ನಡೆದ ಪ್ರೌಢಶಾಲಾ ವಿದ್ಯಾರ್ಥಿಗಳ ಕೆರೆ ಅಧ್ಯಯನ ವರದಿ ಮಂಡನೆ ಈಗಾಗಲೇ ಬೆಂಗಳೂರು, ಶಿರಸಿ, ಹೊನ್ನಾವರ, ಸಾಗರ ಗಳಲ್ಲಿ ನಡೆದಿವೆ. ಅಂತಿಮ ಸುತ್ತಿನಲ್ಲಿ ಪಶ್ಚಿಮಘಟ್ಟದ 34 ವಿದ್ಯಾರ್ಥಿ ತಂಡಗಳು ಹಾಗೂ ಬೆಂಗಳೂರಿನ 38 ತಂಡಗಳು ಆಯ್ಕೆ ಆಗಿವೆ. ಇವರು ಕೆರೆ ಸಮ್ಮೇಳನದ 2ನೇ ದಿನ ಲಯನ್ಸ್ ಸ್ಕೂಲಿನಲ್ಲಿತಮ್ಮ ಸಮೀಕ್ಷಾ ವರದಿ ಮಂಡಿಸುವರು. ಏಕಕಾಲದಲ್ಲಿ 2 ಸ್ಥಳಗಳಲ್ಲಿ ವಿದ್ಯಾರ್ಥಿಗಳ ಗೋಷ್ಠಿ ನಡೆಯಲಿದೆ. ಇವುಗಳ ಜೊತೆಗೆ ಮಹತ್ವದ ತಾಂತ್ರಿಕ ಗೋಷ್ಠಿಗಳು ನಡೆಯಲಿದೆ. ಇದೇ ರೀತಿ ಶಿಕ್ಷಕರಿಗಾಗಿ ಕೆರೆ ಅಧ್ಯಯನ ವರದಿ ಮಂಡನೆ ಗೋಷ್ಠಿಯನ್ನು ನ.15 ರಂದು ಬೆಳಿಗ್ಗೆ ಬೈರುಂಬೆ ಪ್ರೌಢಶಾಲೆಯಲ್ಲಿ ನಡೆಸಲಾಗುವುದು. ಸಮಾರೋಪ ಸಮಾರಂಭದಲ್ಲಿ ಸಹ್ಯಾದ್ರಿ ಯುವ ವಿಜ್ಞಾನಿ ಪ್ರಶಸ್ತಿ ಹಾಗೂ ಸಹ್ಯಾದ್ರಿ ವಿಜ್ಞಾನಿ ಪ್ರಶಸ್ತಿ, ವೃಕ್ಷ-ಲಕ್ಷ್ಯ ಪ್ರಶಸ್ತಿಗಳನ್ನು ನೀಡಲಾಗುತ್ತದೆ ಎಂದು ತಿಳಿಸಿದರು.